# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.**

ಸಂ:ಬಿಬಿಎಂಪಿ/ಸಕಾಅ/ಹೂಉವಿ/31/2020-21 ದಿನಾಂಕ: 03.05.2021

**-:ದಿನಾಂಕ:20-04-2021 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:03.05.2021 ರ ಸೋಮುವಾರ ಮಧ್ಯಾಹ್ನ 3.00 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀಮತಿ.ಡಾ//ಕಲ್ಪನಾ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ | ಹಾಜರಿದ್ದರು. |
| 3. | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 5. | ಶ್ರೀ.ವೆಂಕಟೇಶ್ ಕೆ ಆರ್ | ಮಾರ್ಷಲ್ ಹೂಡಿ | ಹಾಜರಿದ್ದರು. |
| 6. | ಶ್ರೀ.ಚಂದ್ರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು ಭೈರತಿ ಹೂಡಿ-54 | ಹಾಜರಿದ್ದರು. |
| 7. | ಶ್ರೀಮತಿ.ನಾಗರತ್ನ | SWM Sup. | ಹಾಜರಿದ್ದರು. |
| 8. | ಶ್ರೀ.ಪರಂದಾಮ | | ಹಾಜರಿದ್ದರು. |
| 9. | ಶ್ರೀ.ರಿತೀಶ್ | | ಹಾಜರಿದ್ದರು. |

**ಸಭೆಯ ನಡುವಳಿಗಳು:-**

**ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಒಣ ತ್ಯಾಜ್ಯ ಸಂಗ್ರಣಾ ವಾಹನಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ ಎಂದು ಹಲವಾರು ಸಾರ್ವಜನಿಕರು ವಾರ್ಡ್ ಸಮಿತಿ ನೋಡಲ್ ಆಫೀಸರ್ ಗ್ರೂಫ್‌ನಲ್ಲಿ ತಿಳಿಸಿರುತ್ತಾರೆ.
- ಅದರಂತೆ ಅಧ್ಯಕ್ಷರು ಆರೋಗ್ಯ ನಿರೀಕ್ಷರಿಗೆ ಈಗ ಕಾರ್ಯ ನಿರ್ವಹಿಸುತ್ತಿರುವ ಆಟೋಗಳ ಸಾಕಾಗುತ್ತಿರುವುದಿಲ್ಲ ಆದ್ದರಿಂದ ನಿಮ್ಮ ಮುಖಾಂತರ ಮನೆಗಳ ಸಮೀಕ್ಷೆಯಂತೆ ಕಡತವನ್ನು ತಯಾರಿಸಿ ಹೆಚ್ಚುವರಿಯಾಗಿ ನೀಡಬೇಕಿರುವ ಆಟೋಗಳನ್ನು ಮುಖ್ಯ ಕಛೇರಿಯ ಅನುಮತಿಯನ್ನು ಪಡೆದು ಹೆಚ್ಚು ಆಟೋಗಳನ್ನು ಪಡೆದು ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲು ಸೂಚಿಸಲಾಯಿತ್ತು.
- ಭೈರತಿ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷರು ಚೌರಿರಾಜ್ ಚರಂಡಿ ಸ್ವಚ್ಚತೆ ಹಾಗೂ ಕಸ ಸಂಗ್ರಹಣೆ ಮಾಡುವವರು ಸರಿಯಾಗಿ ಮಾಡುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

- ಆನಂದ ಆರ್.ಡಬ್ಲ್ಯೂಎ. ಬೆಳತ್ತೂರು ರವರು ವಾಟರ್ ಲೈನ್ ಶಿಫ್ಟ್ ಮಾಡಲು ಕೊರಿರುತ್ತಾರೆ.
- ಸೋಮಶೇಖರ್ ಆರ್.ಡಬ್ಲ್ಯೂಎ. ಬೆಳತ್ತೂರು ಕಾಲೋನಿ ರವರು ವಾಟರ್ ಪ್ಲಾಂಟ್ ರೆಡಿಯಾಗಿದ್ದು ಚಾಲನೆ ನೀಡಬೇಕಾಗಿದೆ ಎಂದು ತಿಳಿಸಿದರು.
- ಆನಂದ ಆರ್.ಡಬ್ಲ್ಯೂಎ. ಬೆಳತ್ತೂರು ರವರು ವಾಟರ್ ಲೈನ್ ಶಿಫ್ಟ್ ಮಾಡಲು ಕೊರಿರುತ್ತಾರೆ.

**ಕಾಮಗಾರಿ ಇಲಾಖೆ**

- ಚರಂಡಿಗಳಿಗೆ ಸ್ಲಾಬ್ ಹಾಕಿರುವುದಲ್ಲ ಅವುಗಳಿಗೆ ಸ್ಲಾಬ್ಸ್ ಹಾಕಿಸಲು ಕೊರಿರುತ್ತಾರೆ.
- ಆನಂದ ಆರ್.ಡಬ್ಲ್ಯೂಎ. ಬೆಳತ್ತೂರು ಯಲ್ಲಮ್ಮ ದೇವಸ್ಥಾನ ರಸ್ತೆ ಎಚ್.ಡಿ.ಎಫ್.ಸಿ ರಸ್ತೆ, ಸುದರ್ಶನ್ ಮನೆ ರಸ್ತೆಯಲ್ಲಿ ಸೋಮಶೇಖರ್ ಆರ್.ಡಬ್ಲ್ಯೂಎ. ಬೆಳತ್ತೂರು ಕಾಲೋನಿ ರವರು ರಸ್ತೆಗಳಗೆ ಜಲ್ಲಿ ಹಾಕಿ ಹಾಗೆ ಬಿಟ್ಟಿರುತ್ತಾರೆ. ಇದಕ್ಕೆ ಟಾರು ಹಾಕಲು ಕೊರಿರುತ್ತಾರೆ.

**ವಿದ್ಯುತ್**

- ಆನಂದ ಆರ್.ಡಬ್ಲ್ಯೂಎ. ಬೆಳತ್ತೂರು ರವರು ಎಲೆಕ್ಟ್ರೀಕ್ ಪೋಲ್‌ಗಳು ದುರಸ್ಥಿ ಕಾರ್ಯವಾಗಿರಬೇಕಾಗಿರುತ್ತದೆ ಎಂದು ತಿಳಿಸಿದರು.

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ
ಡಾ//ಕಲ್ಪನಾ. ಹೂಡಿ–54
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–54 ಹೂಡಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ
ಮಹದೇವಪುರ ವಲಯ